# ಜಾಗತಿಕ ಪಟ್ಟಿಯಲ್ಲಿ ಸ್ಥಾನ ಪಡೆದ ಸುರತ್ಕಲ್ ಎನ್ಐಟಿಕೆ ಪ್ರೊಫೆಸರ್

**ಮಂಗಳೂರು:** ಪ್ರತಿಷ್ಠಿತ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಕರ್ನಾಟಕ ಸುರತ್ಕಲ್‌ನ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಸಹಪ್ರಾಧ್ಯಾಪಕ ಡಾ.ಶ್ರೀವತ್ಸ ಕೊಳತ್ತಾಯರ್ 2026ನೇ ಸಾಲಿನ ಜಾಗತಿಕ ಮಟ್ಟದ ಸಿವಿಲ್ ಇಂಜಿನಿಯರಿಂಗ್ ಕ್ಷೇತ್ರದ 50 ಪ್ರಭಾವಿ ಚಿಂತಕರು ಎಂಬ ಅಂತಾರಾಷ್ಟ್ರೀಯ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

- **ಟಾಪ್ 50 ಪ್ರಭಾವಿ ಸಿವಿಲ್ ಇಂಜಿನಿಯರಿಂಗ್ ಚಿಂತಕರಲ್ಲಿ ಡಾ.ಶ್ರೀವತ್ಸ ಕೊಳತ್ತಾಯರ್**

ಆಸ್ಟ್ರೇಲಿಯಾದ ಜೊನ್ನೊ ವೈಟ್ ಸಿದ್ಧಪಡಿಸಿರುವ ಈ ಜಾಗತಿಕ ಪಟ್ಟಿ ಮೂಲಸೌಕರ್ಯ, ಹವಾಮಾನ ಸ್ಥಿತಿಸ್ಥಾಪಕತ್ವ ಮತ್ತು ಸುಸ್ಥಿರತೆಗಾಗಿ ಶ್ರಮಿಸುತ್ತಿರುವ ವಿಶ್ವದ ಪ್ರಮುಖ ತಜ್ಞರನ್ನು ಗುರುತಿಸಿ ಗೌರವಿಸುತ್ತದೆ. ವಿಶ್ವಮಟ್ಟದ ಈ ಟಾಪ್ 50 ಪಟ್ಟಿಯಲ್ಲಿ ಸ್ಥಾನ ಪಡೆದ ಭಾರತದ ಇಬ್ಬರು ತಜ್ಞರಲ್ಲಿ ಡಾ.ಶ್ರೀವತ್ಸ ಕೂಡ ಒಬ್ಬರಾಗಿದ್ದಾರೆ. ಭೂಕುಸಿತದ ಅಧ್ಯಯನಗಳು, ಜಿಯೋ ಟೆಕ್ನಿಕಲ್ ವಿಪತ್ತು ತಡೆಗಟ್ಟುವಿಕೆ ಮತ್ತು ಪ್ರಕೃತಿ ಆಧಾರಿತ ಮೂಲಸೌಕರ್ಯ ಪರಿಹಾರಗಳ ಕ್ಷೇತ್ರದಲ್ಲಿ ಡಾ.ಶ್ರೀವತ್ಸ ನಡೆಸಿರುವ ಸಂಶೋಧನೆ ಮತ್ತು ಸಮಾಜಮುಖಿ ಕಾರ್ಯಗಳನ್ನು ಗುರುತಿಸಿ ಈ ಅಂತಾರಾಷ್ಟ್ರೀಯ ಮನ್ನಣೆ ನೀಡಲಾಗಿದೆ.

Vijayavani, Date:20/5/26, p, 03